ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಆಲೋಚನೆ ಇದೆ.

ನೂತನ ಕೈಗಾರಿಕಾ ನೀತಿ 2014–19ನ್ನು, 2014ರ ಆಗಸ್ಟ್ ತಿಂಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಹೌದು.

ನಿವೇಶನಗಳನ್ನು ಹಂಚಿಕೆ ಮಾಡದಿರುವುದು

251(3188); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಬಿಡದಿ ಕೈಗಾರಿಕಾ ಪ್ರದೇಶದ 2ನೇ ಫೇಸ್, 2ನೇ ಸೆಕ್ಟಾರ್‌ನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸರ್ಕಾರ ನಿಗಧಿಪಡಿಸಿದ ನಿವೇಶನಗಳು ಮತ್ತು ನಿಗಧಿಪಡಿಸಿದ ವಿಸ್ತೀರ್ಣ ಈ ಜನಾಂಗದವರಿಗೆ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಆ ಜನಾಂಗದವರಿಗೆ ಅನ್ಯಾಯವೆಸಗಿದ ಅಧಿಕಾರಿ / ನೌಕರರ ವಿರುದ್ಧ ತನಿಖೆಗೆ ಮನವಿ ಬಂದಿದೆಯೇ;

ಇ) ಹಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಕುರಿತು ಶ್ರೀ ಆರ್. ದೇವರಾಜ್ ಎಂಬುವವರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಮುಂದೆ ದೂರನ್ನು ದಿನಾಂಕ: 07.03.2013 ರಂದು ಸಲ್ಲಿಸಿದ್ದು, ಆಯೋಗವು ಪ್ರಕರಣ ಸಂಖ್ಯೆ: 47/2011ನ್ನು ದಾಖಲಿಸಿಕೊಂಡಿತ್ತು.

ಇ) ಮಾನ್ಯ ಆಯೋಗವು ಈ ಕುರಿತು ವಿಚಾರಣೆಯನ್ನು ನಡೆಸಿದ್ದು, ಅರ್ಜಿ ಸಲ್ಲಿಸಿದ್ದ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಜೇಷ್ಠತೆಯ ಆಧಾರದ ಮೇಲೆ ನಿವೇಶನಗಳನ್ನು ಹಂಚಿಕೆ ಮಾಡಿರುವುದನ್ನು ಗಮನಿಸಿ, ದಿನಾಂಕ 28.05.2013ರಂದು ಪ್ರಕರಣವನ್ನು ಮುಕ್ತಾಯಗೊಳಿಸಿ, ಆದೇಶಿಸಿರುತ್ತದೆ. ಆದುದರಿಂದ ಯಾರ ಮೇಲೆಯೂ ಕ್ರಮ ಕೈಗೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ.

ವಿವಿಧ ವೃಂದಗಳ ಮಾಹಿತಿ ಒದಗಿಸುವುದು

252(3679); ಶ್ರೀಮತಿ ಶಾರದ ಪೂರ್ಯನಾಯ್ಕ (ಶಿವಮೊಗ್ಗ ಗ್ರಾಮಾಂತರ)

ಅ) ರಾಜ್ಯದ ವಾಣಿಜ್ಯ ಇಲಾಖೆಯಲ್ಲಿ ಎಲ್ಲಾ ಹಂತದಲ್ಲಿ ಮಂಜೂರಾತಿ ಮಾಡಿರುವ ಹುದ್ದೆಗಳ ಸಂಖ್ಯೆ ಎಷ್ಟು? ಭರ್ತಿಯಾಗಿರುವ ಹಾಗೂ ಖಾಲಿಯಾಗಿರುವ ಹುದ್ದೆಗಳೆಷ್ಟು (ವೃಂದವಾರು ವಿವರ ಒದಗಿಸುವುದು)

ಆ) ಇಲಾಖೆಯಲ್ಲಿ ವೃಂದವಾರು ಕಾಲಕಾಲಕ್ಕೆ ಬಡ್ತಿ ನೀಡಲಾಗುತ್ತಿದೆಯೇ (ದಿ: 31.12.2013 ಕ್ಕೆ ಅಂತ್ಯಗೊಂಡಂತೆ ಈವರೆವಿಗೂ ಬಡ್ತಿ ನೀಡಿರುವ ವೃಂದವಾರು ಸಂಖ್ಯೆಗಳ ಪಟ್ಟಿ ಮತ್ತು ದಿ: 31.12.2013 ಕ್ಕೆ ಅಂತ್ಯಗೊಂಡಂತೆ ಜೇಷ್ಠತಾ ಪಟ್ಟಿ ಒದಗಿಸುವುದು)

ಇ) ಇಲಾಖೆಯ ಎಲ್ಲಾ ವೃಂದದ ಹುದ್ದೆಗಳಿಗೆ ಮಾಡಿರುವ ವೃಂದ ಮತ್ತು ನೇಮಕಾತಿ (C & R Rules) ನಿಯಮಗಳಾವುವು? (C & R ಪ್ರತಿ ನೀಡುವುದು)

ಈ) ಇಲಾಖೆಯಲ್ಲಿ ವೃಂದವಾರು ಬ್ಯಾಕ್‌ಲಾಗ್ ಹುದ್ದೆಗಳೆಷ್ಟು? ಈ ಹುದ್ದೆಗಳನ್ನ ಭರ್ತಿ ಮಾಡಲಾಗಿದೆಯೇ? ಹಾಗಿಲ್ಲದಿದ್ದಲ್ಲಿ, ಭರ್ತಿ ಮಾಡಲು ಯಾವ ಕ್ರಮ ವಹಿಸಲಾಗಿದೆ (ದಾಖಲೆ ಸಹಿತ ವಿವರ ನೀಡುವುದು)?